
ಜೀವಂತಿಕೆಯಲ್ಲಿ ನಂಬಿಕೆ ಇರಿಸಿದ್ದ ಈಜಿಪ್ಷಿಯನ್ನರು ಮಾತ್ರ ಪಿರಮಿಡ್‌ಗಳೆಂಬ ಸ್ಮಾರಕಗಳನ್ನೂ ಸಂಗ್ರಹಾಲಯಗಳನ್ನೂ ಗೋರಿಯ ರೂಪದಲ್ಲಾದರೂ ನಿರ್ಮಿಸಿದ್ದಾರೆ.

ಮೈಸೂರು ಅರಮನೆ ಮತ್ತು ಜಗತ್ತಿನ ಇಂದಿನ ಕಲಾಸಂಗ್ರಹಾಲಯದ ವ್ಯಾಖ್ಯೆಗಳನ್ನು ಒಟ್ಟಿಗೆ ಬೆಸೆದಿಡಬಹುದೆ? ಇದು ಬಹುಮುಖ್ಯವಾದ ಪ್ರಶ್ನೆ. ಏಕೆಂದರೆ ಸೋಷಿಯಲ್ ಮೀಡಿಯಾದಲ್ಲಿ ಈ ಅರಮನೆಯ ಕಲಾತ್ಮಕತೆಯ ಕುರಿತು ಕೇವಲ ಮಿಶ್ರ ಅಭಿಪ್ರಾಯಗಳಲ್ಲ, ಪರಸ್ಪರ ವಿರುದ್ಧ ಅಭಿಪ್ರಾಯಗಳೂ ಇವೆ. ಈ ಸಂಗ್ರಹಾಲಯವನ್ನು ಕೆಟ್ಟದಾಗಿ ಇರಿಸಿಕೊಳ್ಳಲಾಗಿದೆ, ರವಿವರ್ಮನ 'ಜಟಾಯು ವಧೆ' ಚಿತ್ರ ತೂತು ಬಿದ್ದಿದೆ, 'ದೀಪ ಹಿಡಿದ ಸ್ತ್ರೀ' ಕೃತಿಯನ್ನು ರವಿವರ್ಮ ಚಿತ್ರಿಸಿದ್ದು ಇತ್ಯಾದಿ ನೇತ್ಯಾತ್ಮಕ ಅಭಿಪ್ರಾಯಗಳಂತೆ, ಇದು ಅತ್ಯುತ್ತಮ ಸಂಗ್ರಹ, ರವಿವರ್ಮ, ಕೆ.ವಿ, ಮೈಸೂರು ಸಾಂಪ್ರದಾಯಿಕ ಕಲಾವಿದರ ಪುನರುಜ್ಜೀವನ, ಪತ್ರಾಗಾರ, ಕೋಶಾಗಾರದ ಅತ್ಯುತ್ತಮ ಸಂಗ್ರಹ ಎಂಬುವವರೆಗೂ ಭಿನ್ನ-ಅಭಿಪ್ರಾಯಗಳಿವೆ.

## ಕಥೆ ಹೇಳುವ ಚಿತ್ರಸರಣಿ

ಅರಮನೆಯ ಕಲಾಕೃತಿಗಳು ಅಪರೂಪವೆನ್ನಿಸಿಕೊಳ್ಳಲು ಅವುಗಳಲ್ಲಿ ಗೋಚರವಾಗುವ ಕಲಾತ್ಮಕತೆ ಹೇಗೆ ಮುಖ್ಯವೋ ಅಷ್ಟೇ ಮುಖ್ಯ ಅಥವ ಅದಕ್ಕಿಂತಲೂ ಹೆಚ್ಚು ಸಾಮಾಜಿಕ, ರಾಜಕಾರಣದ ಕಾರಣಗಳಿವೆ. ಇವು ನಿರ್ದಿಷ್ಟವಾಗಿ ಇಲ್ಲಿನ ಅರಮನೆಯಲ್ಲಿಯೇ, ಬೇರ್ಪಡಿಸಲಾಗದಂತೆ ಸೃಷ್ಟಿಗೊಂಡಿರುವುದೇ ಆಗಿದೆ. ಅದರಲ್ಲಿ ಅತ್ಯಂತ ಪ್ರಮುಖವಾದ ಸರಣಿಯೆಂದರೆ ದಸರಾ ಮೆರವಣಿಗೆಯನ್ನು ಕುರಿತಾದ 29 ಭಿತ್ತಿಚಿತ್ರ ಸರಣಿ ಚಿತ್ರಗಳು.

1920ರಿಂದ 40ರ ದಶಕಗಳ (1934—45) ನಡುವೆ ಈ 29 ಭಿತ್ತಿಚಿತ್ರಗಳನ್ನು ಹಲವು ಕಲಾವಿದರು ಅರಮನೆಯಲ್ಲಿ ಸೃಷ್ಟಿಸಿದರು. ಖ್ಯಾತ ಅರಮನೆ ಕಲಾವಿದರು (ಬಹುತೇಕ ಎಲ್ಲರೂ ಸೋಮವಂಶೀಯ ಆರ್ಯಕುಲಕ್ಕೆ ಸೇರಿದವರು) ಈ ಚಿತ್ರಗಳನ್ನು ಸಮಕಾಲೀನವಾಗಿ ವಿನ್ಯಾಸಗೊಳಿಸಿ ಕ್ಲಿಕ್ಕಿಸಲಾದ ನೈಜ ಫೋಟೋಗಳನ್ನು ಆಧರಿಸಿ ಸೃಷ್ಟಿಸಿದ ಭಿತ್ತಿಸರಣಿ ಇವು. ಎಸ್.ಎನ್. ಸ್ವಾಮಿ, ಕೇಶವಯ್ಯ, ವೈ. ನಾಗರಾಜು, ವೈ. ಸುಬ್ರಹ್ಮಣ್ಯ ರಾಜು, ಎಸ್. ಶಂಕರರಾಜು ಮತು ಎಸ್.ಆರ್. ಅಯ್ಯಂಗಾರ್ ಈ ಭಿತ್ತಿಚಿತ್ರಗಳನ್ನು ಸೆರೆಹಿಡಿದ ಕಲಾವಿದರು. ಎರಡನೇ ಪ್ರಪಂಚ ಯುದ್ಧ ನಡೆಯುತ್ತಿದ್ದ ಕಾಲಘಟ್ಟದಲ್ಲಿ ಸೃಷ್ಟಿಯಾದ ಕೃತಿಗಳು ಇವಾದರೂ, ಬ್ರಿಟಿಷರೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಕೆಲವೇ ಪ್ರಭಾವಿ ರಾಜಾಡಳಿತದ ರಾಜ್ಯಗಳಲ್ಲಿ ಒಂದಾದ ಮೈಸೂರು ಅರಮನೆಯು ಆರ್ಥಿಕವಾಗಿ ಯಾವುದೇ ಹಿನ್ನಡೆಯನ್ನು ಅನುಭವಿಸಿದಂತೆ ಕಾಣುವುದಿಲ್ಲ. ತೈಲವರ್ಣದಲ್ಲಿ ಸೃಷ್ಟಿಗೊಂಡಿರುವ ಈ ಭಿತ್ತಿಗಳು ಅದೇ ಕಾರಣಕ್ಕೆ



ಕಲಾವಿದ ಮಾರಿಯೋ ಮಿರಾಂಡ ರಚಿಸಿರುವ ಮೈಸೂರು ಆಗ್ರಹಾರದ ದೃಶ್ಯ

ಭಿನ್ನವೆನ್ನಿಸಿಕೊಳ್ಳುತ್ತವೆ. ಪೂರ್ವಸಿದ್ಧಗೊಳಿಸಲಾದ ಛಾಯಾಚಿತ್ರಣಗಳನ್ನು ವರ್ಣಮಯಗೊಳಿಸಿದ ಕಾರ್ಯ ಈ ಸರಣಿ. ಅರಮನೆಯ ದಸರಾ ವೈಭವದ ಆಲ್ಬಂ ಅನ್ನು ಅರಮನೆಯಲ್ಲಿಯೇ, ಅಲ್ಲಿಗೆ ಬರುವವರೆಲ್ಲರಿಗೂ ಗೋಚರವಾಗುವಂತೆ ತೆರೆದಿಡುವ ತೆರೆದ-ಪುಸ್ತಕವೂ ಹೌದು ಈ ಸರಣಿ. ಲಂಡನ್ನಿನಲ್ಲಿ 'ಲಂಡೇನಿಯಮ್' ಎಂಬ, ಅದರ ರೋಮನ್ ಹೆಸರಿನ ಕಾಲದಿಂದಲೂ (50 ಕ್ರಿ.ಶ.) ಆ ನಗರವು ಅಭಿವೃದ್ಧಿಗೊಂಡ ದೃಶ್ಯ-ಶ್ರಾವ್ಯ ಇತಿಹಾಸದ ಸಂಗ್ರಹಾಲಯವಿದ್ದಂತೆ ಇದು. ಬೆಂಗಳೂರಿಗೆ ಇನ್ನೂ ಆ ಭಾಗ್ಯ ಬಂದಿಲ್ಲ. ಮೈಸೂರು ಅರಮನೆಯ ದಸರಾ ಸರಣಿ ಇಂತಹ ಒಂದು ಆತ್ಮೀಯ ನಾರ್ಸಿಸಿಸ್ಟ್ ಸರಣಿ. ತನ್ನದೇ ಇತಿಹಾಸದ ದೃಶ್ಯದಾಖಲೆಯನ್ನು ತಾನೇ ಒಳಗೊಂಡಿರುವಾಗ, ತಾನು ಇತಿಹಾಸವೋ ಸಮಕಾಲೀನವೋ ಆದುದರಿಂದಲೇ ತಾನು ಪ್ರಸ್ತುತವೋ ಎಂಬ ಸ್ವಯಂ-ಪ್ರಸರಣದ ಗುಣ ಮೈಸೂರು ಅರಮನೆಗಿದೆ. ಭಾರತದಲ್ಲಿ ದಾಖಲೀಕರಣ ಅಥವ ಡಾಕ್ಯುಮೆಂಟೇಶನ್ ಸಂಪ್ರದಾಯ ಇಲ್ಲದ್ದರಿಂದಲೋ ಏನೋ, ಹೈದರಾಬಾದಿನ ಸಾಲಾರ್‌ಜಂಗ್ ಸಂಗ್ರಹಾಲಯ ಹಾಗೂ ಮೈಸೂರರಮನೆ — ಇವೆರಡೂ ತಮ್ಮ ಇತಿಹಾಸವನ್ನು ತಾವೇ ಒಳಗೊಂಡಿವೆ.

## ಕಲಾವಿದನ ಸ್ವಂತಿಕೆಯ ಛಾಪು

ಅಮನೆಯಲ್ಲಿನ 29 ಬೃಹತ್ ಭಿತ್ತಿಚಿತ್ರಗಳಲ್ಲಿ ಮೈಸೂರು ದಸರಾ ಉತ್ಸವದ ವೈಭವೋಪೇತ ಚಿತ್ರಣವಿದೆ. ಪ್ರವಾಸೋದ್ಯಮಕ್ಕೆ ಸೂಕ್ತವಾಗುವಂತಿರಲಿ ಎಂಬ ಆರಂಭಿಕ ಉದ್ದೇಶ ಇವುಗಳ ಸೃಷ್ಟಿಯ ಹಿಂದಿತ್ತು. ದಸರಾ ಮೆರವಣಿಗೆಯ ವಿಸ್ತೃತ ವಿವರಣೆ ತೈಲವರ್ಣದಲ್ಲಿ ಮೂಡಿಬಂದಿವೆ. ಅದೇನು ಕಾರಣವೋ, ಮೆರವಣಿಗೆಯ ಎಡಕ್ಕೆ ನಿಂತು ನೋಡುವಂತಿರುವ ದೃಶ್ಯಗಳೇ ಹೆಚ್ಚಿವೆ.

ನಗರ, ಪೇಟೆ, ಗ್ರಾಮಾಂತರ ಪ್ರದೇಶ, ಅನ್ಯಧರ್ಮೀಯರು, ಆಚರಣೆಗೆ ಅವಶ್ಯವಿರುವ ಜನ, ವಿನ್ಯಾಸ, ವಸ್ತ್ರ, ಅಸ್ತ್ರ-ಶಸ್ತ್ರ, ಶೃಂಗಾರ, ಲಾಂಛನಗಳ ಜೊತೆಜೊತೆಗೆ ವರ್ಗ, ವರ್ಣ, ಜಾತಿ, ಹೆಸರುಗಳ ವ್ಯತ್ಯಾಸಗಳನ್ನೂ ವಿವರವಾಗಿ ಹಿಡಿದಿರಿಸಲಾಗಿದೆ. ರೆನಾಯಸಾನ್ಸ್ ಕಲಾವಿದ ರೆಫೈಲ್ ರಚಿಸಿದ 'ದ ಸ್ಕೂಲ್ ಆಫ್ ಅಥೆನ್ಸ್' ಚಿತ್ರವನ್ನು ಇವು ನೆನಪಿಸುತ್ತವೆ. ಅಲ್ಲಿ ಮತ್ತು ಇಲ್ಲಿ ಇರುವ ಸಾಮ್ಯತೆ ಎಂದರೆ, ಒಂದೇ ಕಾಲಘಟ್ಟದಲ್ಲಿ ಜೀವಿಸಿಲ್ಲದಿದ್ದವರನ್ನೂ ಒಟ್ಟಿಗೆ